# ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿ.
(ಕರ್ನಾಟಕ ಸರ್ಕಾರ ಸ್ವಾಮ್ಯದ ಉದ್ಯಮ)
"ಶ್ರೀಸಿದ್ದಲಿಂಗೇಶ್ವರ ನಿಲಯ" ಕೆ.ಎಸ್.ಎಫ್.ಸಿ ಎದುರು ರಸ್ತೆ, ಕೃಷ್ಣಾನಗರ, 8ನೇ ಕ್ರಾಸ್, ತುಮಕೂರು-572103.

## The Karnataka Minorities Development Corporation Ltd.
(A Governament of Karnataka Undertaking)
"Sri Siddalingeshwara Nilaya " Opposite to K.S.F.C, Krishna Nagar, 8th cross Tumkur-572103

## ನಿಗಮದ ಸ್ಥಾಪನೆ

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವು ದಿನಾಂಕ 17-02-1986 ರಲ್ಲಿ ಸ್ಥಾಪನೆಯಾಗಿದ್ದು ಈ ನಿಗಮದಿಂದ ಮತೀಯ ಅಲ್ಪಸಂಖ್ಯಾತರು ಅಂದರೆ ಮುಸಲ್ಮಾನರು, ಕ್ರೈಸ್ತರು, ಜೈನರು, ಬೌದ್ಧರು, ಸಿಖ್ಖರು ಮತ್ತು ಪಾರ್ಸಿ ಜನಾಂಗದವರ ಏಳಿಗೆಗಾಗಿ ಮತ್ತು ಆರ್ಥಿಕ ಅಭಿವೃದ್ಧಿಗಾಗಿ ಅನೇಕ ಯೋಜನೆಗಳನ್ನು ಹಮ್ಮಿಕೊಂಡು ಕಾರ್ಯರೂಪಕ್ಕೆ ತರಲಾಗುತ್ತಿದೆ. ನಿಗಮದ ಎಲ್ಲಾ ಯೋಜನೆಗಳಲ್ಲಿ ಶೇ.80 ರಷ್ಟು ಮುಸ್ಲಿಂ, ಶೇ.10 ರಷ್ಟು ಕ್ರಿಶ್ಚಿಯನ್, ಮತ್ತು ಶೇ. 10 ರಷ್ಟು ಇತರೆ ಅಲ್ಪಸಂಖ್ಯಾತರು ಅಂದರೆ ಜೈನರು, ಬೌದ್ಧರು, ಸಿಖ್ಖರು ಮತ್ತು ಪಾರ್ಸಿ, ಜನಾಂಗದವರಿಗೆ ಆಯ್ಕೆಯ ಸಂದರ್ಭದಲ್ಲಿ ಮೀಸಲಾತಿಯನ್ನು ನೀಡಲಾಗುವುದು. ಅಲ್ಲದೆ ನಿಗಮದ ಯೋಜನೆಗಳಲ್ಲಿ ಮಹಿಳೆಯರಿಗೆ ಶೇ. 33% ಅಂಗವಿಕಲರಿಗೆ ಶೇ 5% ಮೀಸಲಾತಿ ನೀಡಿ ಆಧ್ಯತೆಯ ಮೇಲೆ ಸೌಲಭ್ಯವನ್ನು ಒದಗಿಸಲಾಗುವುದು.

ತುಮಕೂರು ಜಿಲ್ಲೆಯಲ್ಲಿ ಮತೀಯ ಅಲ್ಪಸಂಖ್ಯಾತರ ಜನಸಂಖ್ಯೆಯು 2011 ರ ಜನಗಣತಿ ಪ್ರಕಾರ 260784 ಇದ್ದು ಜಿಲ್ಲೆಯ ಒಟ್ಟು ಜನಸಂಖ್ಯೆಯ ಶೇ.9.70% ಆಗಿರುತ್ತದೆ. ಜಿಲ್ಲೆಯಲ್ಲಿ ವಾಸಿಸುತ್ತಿರುವ ಮುಸಲ್ಮಾನರು, ಕ್ರೈಸ್ತರು, ಜೈನರು, ಬೌದ್ಧರು, ಸಿಖ್ಖರು ಮತ್ತು ಪಾರ್ಸಿ ಜನಾಂಗದವರು ಮತೀಯ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿರುತ್ತಾರೆ. ಅಲ್ಪಸಂಖ್ಯಾತ ಸಮುದಾಯದ ಬಹುಪಾಲು ಜನರು ಬಡತನದ ರೇಖೆಯ ಕೆಳಗಿದ್ದು ಅವರ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸ್ಥಿತಿಗತಿಯನ್ನು ಉತ್ತಮಪಡಿಸುವ ಸಲುವಾಗಿ ನಿಗಮವನ್ನು ಸ್ಥಾಪಿಸಲಾಗಿದೆ.

## ನಿಗಮದ ಉದ್ದೇಶ :-

ಮತೀಯ ಅಲ್ಪಸಂಖ್ಯಾತ ಸಮುದಾಯದವರ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಯನ್ನು ಉತ್ತಮಪಡಿಸುವ ಸಲುವಾಗಿ ಹಾಗೂ ಅವರನ್ನು ಸಮಾಜದ ಮುಖ್ಯವಾಹಿನಿಗೆ ತರುವ ಏಕೈಕ ಉದ್ದೇಶದಿಂದ ಆಗಿನ ಮುಖ್ಯಮಂತ್ರಿಯಾಗಿದ್ದ ದಿವಂಗತ ರಾಮಕೃಷ್ಣ ಹೆಗ್ಡೆಯವರ ನೇತೃತ್ವದ ಸರ್ಕಾರವು ದಿನಾಂಕ : 07.02.1986 ರಂದು ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಿತು. ರಾಜ್ಯದ ಮತೀಯ ಅಲ್ಪಸಂಖ್ಯಾತ ಸಮುದಾಯದ ಕಡುಬಡವರನ್ನು ಸ್ವಾವಲಂಬಿಗಳನ್ನಾಗಿ ಮಾಡುವುದು ಮತ್ತು ಅವರಿಗೆ ಸಾಮಾಜಿಕ ನ್ಯಾಯ ಕಲ್ಪಿಸುವುದು ಹಾಗೂ ಅವರ ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಯನ್ನು ಸುಧಾರಿಸುವುದು ನಿಗಮದ ಮುಖ್ಯ ಉದ್ದೇಶವಾಗಿದೆ.

## ನಿಗಮದ ರಚನೆ :-

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವು ರಾಜ್ಯ ಸರ್ಕಾರದ ಸ್ವಾಮ್ಯದ ಉದ್ಯಮವಾಗಿದ್ದು 1956ರ ಕಂಪನಿ ಕಾಯ್ದೆಯನ್ವಯ ಸ್ಥಾಪಿಸಲ್ಪಟ್ಟಿದೆ. ನಿಗಮದ ಇದುವರೆಗಿನ ಅಧಿಕೃತ ಷೇರು ಬಂಡವಾಳವು ರೂ. 600.00 ಕೋಟಿ ಇರುತ್ತದೆ. ಪಾವತಿಸಿದ ಬಂಡವಾಳ ರೂ. 99.78 ಕೋಟಿ ಇರುತ್ತದೆ. ಕರ್ನಾಟಕ ಸರ್ಕಾರದ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಆಡಳಿತಾತ್ಮಕ ಮೇಲ್ವಿಚಾರಣೆಯಲ್ಲಿ ನಿಗಮವು ಕಾರ್ಯನಿರ್ವಹಿಸುತ್ತಿದೆ. ನಿಗಮದ ನೋಂದಾಯಿತ ಕಛೇರಿ ಬೆಂಗಳೂರಿನಲ್ಲಿ ಇದ್ದು ಇದರ ಜಿಲ್ಲಾ ಕಛೇರಿಗಳು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಇರುತ್ತದೆ. ರಾಜ್ಯ ಸರ್ಕಾರ ಪ್ರಾಯೋಜಿತ ಯೋಜನೆಗಳನ್ನು ನಿಗಮದ ಜಿಲ್ಲಾ ಕಛೇರಿಗಳ ಮೂಲಕ ಅನುಷ್ಠಾನಗೊಳಿಸಿಸುವುದು.

ಜಿಲ್ಲಾ ವ್ಯವಸ್ಥಾಪಕರು
ಕೆ.ಅ.ಅ.ನಿ., ತುಮಕೂರು

Scanned with CamScanner

## ನಿಗಮದ ಸಂಘಟನಾ ವ್ಯವಸ್ಥೆ

ನಿಗಮದ ನಿರ್ದೇಶಕರ ಮಂಡಳಿಗೆ ಸರ್ಕಾರದ ನಾಮನಿರ್ದೇಶಿತಗೊಂಡಿರುವ ಮಾನ್ಯ ಅಧ್ಯಕ್ಷರು ನೇಮಕಗೊಂಡಿರುತ್ತಾರೆ. ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ನಿಗಮದ ಆಡಳಿತಾತ್ಮಕ ಮುಖ್ಯಸ್ಥರಾಗಿರುತ್ತಾರೆ. ಮಾನ್ಯ ವ್ಯವಸ್ಥಾಪಕ ನಿರ್ದೇಶಕರ ನಿಯಂತ್ರಣದಲ್ಲಿ ಕೇಂದ್ರ ಕಛೇರಿಯಲ್ಲಿ ಕಂಪನಿ ಕಾರ್ಯದರ್ಶಿ, ಪ್ರಧಾನ ವ್ಯವಸ್ಥಾಪಕರು (ಯೋ), ಉಪಪ್ರಧಾನ ವ್ಯವಸ್ಥಾಪಕರು (ಯೋಜನೆ), ಪ್ರಧಾನ ಹಣಕಾಸು ಅಧಿಕಾರಿ, (ಆಡಳಿತ ಮತ್ತು ಸಿಬ್ಬಂದಿ) ಲೆಕ್ಕ ಅಧೀಕ್ಷಕರು, ಅಭಿವೃದ್ಧಿ ಅಧಿಕಾರಿ, ಅಭಿವೃದ್ಧಿ ಪರಿವೀಕ್ಷಕರು ಹಾಗೂ ಪ್ರಥಮ ದರ್ಜೆ ಸಹಾಯಕರು ಡಿ.ಇ.ಓ. ಹಾಗೂ ಇತರೆ ಸಿಬ್ಬಂಧಿ ವರ್ಗದವರು ಕರ್ತವ್ಯನಿರ್ವಹಿಸುತ್ತಿದ್ದಾರೆ. ನಿಗಮದ ಜಿಲ್ಲಾ ಕಛೇರಿಗಳಲ್ಲಿ ಜಿಲ್ಲಾ ವ್ಯವಸ್ಥಾಪಕರು ಮತ್ತು ಡಾಟಾ ಎಂಟ್ರಿ ಆಪರೇಟರ್ (ಡಿ.ಇ.ಓ) ಒಳಗೊಂಡ ಸಿಬ್ಬಂಧಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ.

**1.ರಾಜ್ಯ ಸರ್ಕಾರದ ಅನುದಾನದಿಂದ ಅನುಷ್ಠಾನಗೊಳಿಸುವ ಯೋಜನೆಗಳಲ್ಲಿ ಇರಬೇಕಾದ ಅರ್ಹತೆಗಳು:**

1. ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿ ತುಮಕೂರು ಜಿಲ್ಲೆಯ ವ್ಯಾಪ್ತಿಯೊಳಗೆ ವಾಸವಾಗಿರಬೇಕು.
2. ಅರ್ಜಿದಾರರು ಸರ್ಕಾರವು ಅಂಗೀಕರಿಸಿದ ಅಲ್ಪಸಂಖ್ಯಾತ ವರ್ಗಗಳ ಪ್ರವರ್ಗ-1, ಪ್ರವರ್ಗ-2ಬಿ, 3 ಎ ಮತ್ತು 3ಬಿ ಗುಂಪಿಗೆ ಸೇರಿದವರಾಗಿರಬೇಕು.
3. ಕುಟುಂಬದ ವಾರ್ಷಿಕ ವರಮಾನ ಗ್ರಾಮಾಂತರ ಪ್ರದೇಶದಲ್ಲಿ ವಾಸಮಾಡುವವರಿಗೆ ರೂ. 81,000/-ನಗರ ಪ್ರದೇಶದಲ್ಲಿ ವಾಸಮಾಡುವವರಿಗೆ ರೂ. 1,03,000/-(ಅರಿವು ಯೋಜನೆಯಲ್ಲಿ ರೂ.6.00 ಲಕ್ಷಗಳು) ಮೀರಬಾರದು.
4. ಅರ್ಜಿದಾರರ ವಯಸ್ಸು ಕನಿಷ್ಠ 18 ಗರಿಷ್ಠ 55 ವರ್ಷದೊಳಗಿರಬೇಕು.
5. ಅರ್ಜಿದಾರರು ಕೈಗೊಳ್ಳುವ ಯೋಜನೆಯಲ್ಲಿ ಸಾಕಷ್ಟು ಅನುಭವ ಮತ್ತು ಪರಿಣಿತಿ ಹೊಂದಿರಬೇಕು.
6. ಅರ್ಜಿದಾರರು ಬ್ಯಾಂಕಿನಲ್ಲಿ ಉಳಿತಾಯ ಖಾತೆ ಹೊಂದಿರಬೇಕು ಮತ್ತು ಆಧಾರ್ ಸಂಖ್ಯೆಯನ್ನು ಲಿಂಕ್ ಮಾಡಿರಬೇಕು.
7. ಅರ್ಜಿದಾರರು ತಮ್ಮ ವಿಳಾಸದ ದೃಡೀಕರಣಕ್ಕಾಗಿ ಆಧಾರ್ (UID) ಪ್ರತಿಯನ್ನು ಸಲ್ಲಿಸಬೇಕು.

### 1. ಸ್ವಯಂ ಉದ್ಯೋಗ ಯೋಜನೆ :-

ಈ ಯೋಜನೆಯಲ್ಲಿ ಅಲ್ಪಸಂಖ್ಯಾತರ ಜನಾಂಗದವರು ಕೈಗೊಳ್ಳುವ ಅಥವಾ ಅಭಿವೃದ್ಧಿಪಡಿಸಲು ಬಯಸುವ ವ್ಯಾಪಾರ, ಸೇವಾ ಉದ್ದಿಮೆಗಳು, ಗುಡಿ ಕೈಗಾರಿಕೆಗಳು ಹಾಗೂ ಕೃಷಿ ಆಧಾರಿತ ಚಟುವಟಿಕೆಗಳಿಗೆ ಸಾಲ ಸೌಲಭ್ಯವನ್ನು ರಾಷ್ಟ್ರೀಕೃತ ಬ್ಯಾಂಕುಗಳು/ಹಣಕಾಸು ಸಂಸ್ಥೆಗಳ ಮೂಲಕ ಪಡೆಯುವ ಸಾಲ ಘಟಕ ವೆಚ್ಚ ರೂ. 1.00 ಲಕ್ಷದೊಳಗೆ ಇರುವ ಚಟುವಟಿಕೆಗಳಿಗೆ ಶೇ. 50% ಅಥವಾ ಗರಿಷ್ಠ ರೂ. 35,000/- ಸಹಾಯ ಧನ ಮತ್ತು ಘಟಕ ವೆಚ್ಚ ರೂ 1.00 ಲಕ್ಷಕ್ಕಿಂತ ಹೆಚ್ಚಿನ ಚಟುವಟಿಕೆಗಳಿಗೆ ಘಟಕ ವೆಚ್ಚದ ಶೇ 33% ಅಥವಾ ಗರಿಷ್ಠ ಮಿತಿ ರೂ. 2.00 ಲಕ್ಷದ ಸಹಾಯ ಧನ ನಿಗಮದಿಂದ ಮಂಜೂರು ಮಾಡಲಾಗುವುದು ಹಾಗೂ ಉಳಿದ ಮೊತ್ತವು ಬ್ಯಾಂಕುಗಳ/ಹಣಕಾಸು ಸಂಸ್ಥೆಗಳಿಂದ ಚಾಲ್ತಿ ಬಡ್ಡಿದರದಲ್ಲಿ ಸಾಲ ನೀಡಲಾಗುವುದು.

### 2. ಶ್ರಮಶಕ್ತಿ ಯೋಜನೆ ;-

ಮತೀಯ ಅಲ್ಪಸಂಖ್ಯಾತ ಸಮುದಾಯ ಸಾಂಪ್ರದಾಯಿಕ ಕುಶಲ ಕರ್ಮಿಗಳು ಮತ್ತು ವೃತ್ತಿ ಕುಲ ಕಸುಬುದಾರರು ಆಧುನಿಕ ತಂತ್ರಜ್ಞಾನ ಬಳಕೆಯಿಂದಾಗಿ ತಮ್ಮ ಸಾಂಪ್ರದಾಯಿಕ ಮಾರುಕಟ್ಟೆಯನ್ನು ಮತ್ತು ವೃತ್ತಿ ಕೌಶಲ್ಯತೆ ಅಭಿವೃದ್ಧಿ ಪಡಿಸಿಕೊಳ್ಳಲು ಹಾಗೂ ಆದಾಯ ಹೆಚ್ಚಿಸುವ ಚಟುವಟಿಕೆಗಳಿಗೆ ಅಗತ್ಯವಿರುವ ಆರ್ಥಿಕ ನೆರವನ್ನು ಒದಗಿಸುವ ಉದ್ದೇಶದಿಂದ ಶ್ರಮಶಕ್ತಿ ಯೋಜನೆಯಡಿಯಲ್ಲಿ ಘಟಕ ವೆಚ್ಚಕ್ಕೆ ಅನುಗುಣವಾಗಿ ಗರಿಷ್ಠ ರೂ. 50,000/- ಶೇ. 4%

ಜಿಲ್ಲಾ ವ್ಯವಸ್ಥಾಪಕರು

Scanned with CamScanner

ರ ಬಡ್ಡಿ ದರದಲ್ಲಿ ಆರ್ಥಿಕ ನೆರವು ನೀಡಲಾಗುವುದು. ಅಲ್ಲದೆ ಇತರೆ ಆರ್ಥಿಕ ಚಟುವಟಿಕೆಗಳ ಘಟಕ ವೆಚ್ಚಕ್ಕೆ ರೂ.25,000/- ಗಳ ಆರ್ಥಿಕ ನೆರವು ನೀಡಲಾಗುವುದು. ಸದರಿ ಮೊತ್ತದಲ್ಲಿ ಶೇ.50 ಅವಧಿ ಸಾಲ ಮತ್ತು ಉಳಿದ ಶೇ. 50 ಸಾಲವನ್ನು ಬ್ಯಾಕ್ ಎಂಡ್ ಸಹಾಯಧನವಾಗಿ ಪರಿಗಣಿಸಲಾಗುವುದು. ನಿಗದಿತ ಅವಧಿಯೊಳಗೆ ಸಾಲದ ಕಂತುಗಳನ್ನು ಮರುಪಾವತಿಸಿದಾಗ ಮಾತ್ರ ಸಹಾಯಧನವನ್ನು ಬ್ಯಾಕ್ ಎಂಡ್ ಸಬ್ಸಿಡಿಯಾಗಿ ಸಾಲದ ಖಾತಾ ಪುಸ್ತಕದಲ್ಲಿ ಹೊಂದಾಣಿಕೆ ಮಾಡಿಕೊಳ್ಳಲಾಗುವುದು. ತಪ್ಪಿದಲ್ಲಿ ಪೂರ್ತಿ ಮೊತ್ತವನ್ನು ಸಾಲವನ್ನಾಗಿ ಪರಿಗಣಿಸಲಾಗುವುದು.

## 3. ಮೈಕ್ರೋಸಾಲ ಯೋಜನೆ (ಮಹಿಳಾ ಸ್ವ ಸಹಾಯ ಸಂಘಗಳಿಗೆ) :-

ಮತೀಯ ಅಲ್ಪಸಂಖ್ಯಾತರು ಸಾಮಾನ್ಯವಾಗಿ ಅನಕ್ಷರಸ್ಥರಾಗಿದ್ದು ಕುಶಲಿ ಅಥವಾ ಕುಶಲಿಯಲ್ಲದ ಮಹಿಳೆಯರ ಆರ್ಥಿಕ ಅಭಿವೃದ್ಧಿಗಾಗಿ ಅವರು ಸರಳವಾಗಿ ನಿರ್ವಹಿಸುವ ಸಣ್ಣ ಪ್ರಮಾಣದ ಆರ್ಥಿಕ ಚಟುವಟಿಕೆಗಳಿಗೆ ಸಾಲ ಸೌಲಭ್ಯ ನೀಡಲಾಗುವುದು. ಸರ್ಕಾರದ ಇಲಾಖೆಗಳ ಅಥವಾ ಸರ್ಕಾರೇತರ ಸಂಸ್ಥೆಗಳ ಮೂಲಕ ರಚಿತವಾದ ಅಲ್ಪಸಂಖ್ಯಾತ ಮಹಿಳಾ ಸ್ವ ಸಹಾಯ ಗುಂಪುಗಳು ಕನಿಷ್ಠ 10 ಸದಸ್ಯರಿಂದ ಗರಿಷ್ಠ 20 ಸದಸ್ಯರುಗಳನ್ನು ಹೊಂದಿರಬೇಕು. ಸಂಘದ ಪ್ರತಿ ಸದಸ್ಯರಿಗೆ ಅಗತ್ಯ ವಿರುವ ಸಾಲ ರೂ. 5000/- ಮತ್ತು ಸಹಾಯಧನ ರೂ. 5000/- ಹೀಗೆ ಒಟ್ಟು ಪ್ರತಿಯೊಬ್ಬ ಸದಸ್ಯರಿಗೆ ರೂ. 10,000/- ಶೇ. 4 ರ ಬಡ್ಡಿ ದರದಲ್ಲಿ ಆರ್ಥಿಕ ನೆರವು ಈ ಯೋಜನೆಯಲ್ಲಿ ನೀಡಲಾಗುವುದು.

## 4. ಅರಿವು ಸಾಲ ಯೋಜನೆ :-

ಮತೀಯ ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳು ಇಂಜನಿಯರಿಂಗ್, ವೈದ್ಯಕೀಯ, ಡೆಂಟಲ್, ಡಿ.ಇಡಿ, ಬಿ.ಇಡಿ, ಎಂ.ಇಡಿ. ಎಲ್.ಎಲ್.ಬಿ ಮತ್ತು ಇತರೆ ಎಲ್ಲಾ ಪದವಿ, ಸ್ನಾತಕೋತ್ತರ ಪದವಿಗಳಿಗೆ ಹಾಗೂ ಐ.ಟಿ.ಐ. ಡಿಪ್ಲೋಮಾ, ಪ್ಯಾರಾ ಮೆಡಿಕಲ್, ಇತರೆ ವೃತ್ತಿಪರ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವವರಿಗೆ ಕನಿಷ್ಠ ರೂ. 10,000/- ದಿಂದ ಗರಿಷ್ಠ ರೂ, 75,000/- ರೂ. ಪ್ರತಿ ವ್ಯಾಸಂಗದ ಅವಧಿಗೆ ಸಿ.ಇ.ಟಿ. / ಸರ್ಕಾರಿ ಶುಲ್ಕಕ್ಕೆ ಅನುಗುಣವಾಗಿ ಸಾಲವನ್ನು ವಾರ್ಷಿಕ ಶೇ. 2 ರ ಸೇವಾ ಶುಲ್ಕದ ಮೇಲೆ ನೀಡಲಾಗುವುದು.

NEET ಮೂಲಕ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸ್ ಪ್ರವೇಶ ಪಡೆಯುವ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಅವರ ಬೋಧನಾ ಶುಲ್ಕದ ಸರ್ಕಾರಿ ಸೀಟ್‌ನ ಶೇ.100 ರಷ್ಟು ಅಥವಾ ಖಾಸಗಿ ಸೀಟ್‌ನ ಶೇ. 50 ರಷ್ಟು ಸಾಲವನ್ನಾಗಿ ಮಂಜೂರು ಮಾಡಲಾಗುತ್ತದೆ.

## 5. ಗಂಗಾ – ಕಲ್ಯಾಣ ಯೋಜನೆ :-

ಮತೀಯ ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿದ ಸಣ್ಣ ಮತ್ತು ಅತಿ ಸಣ್ಣ ರೈತರು ಕನಿಷ್ಠ 1 ಎಕರೆ 20 ಗುಂಟೆಯಿಂದ ಗರಿಷ್ಠ 5 ಎಕರೆಯ ಒಳಗೆ ಖುಷ್ಕಿ ಜಮೀನು ಹೊಂದಿದವರು ತಮ್ಮ ಖುಷ್ಕಿ ಜಮೀನಿನಲ್ಲಿ ಪ್ರಥಮ ಬಾರಿಗೆ ನೀರಾವರಿ ಸೌಲಭ್ಯ ಹೊಂದಲು ಈ ಯೋಜನೆಯಲ್ಲಿ ವೈಯಕ್ತಿಕ ಕೊಳವೆ ಬಾವಿ ಮಂಜೂರಾತಿ ಸೌಲಭ್ಯ ಪಡೆಯಬಹುದು. ಸದರಿ ಯೋಜನೆಯಲ್ಲಿ ಘಟಕ ವೆಚ್ಚ ರೂ.3.50 ಲಕ್ಷಗಳು ಈ ಮೊತ್ತದಲ್ಲಿ ರೂ. 3.00 ಲಕ್ಷಗಳ ಸಹಾಯಧನ ಮತ್ತು ಬಯಸಿದ್ದಲ್ಲಿ ರೂ. 50,000/- ಸಾಲ ನೀಡಲಾಗುವುದು. ಸದರಿ ಘಟಕ ವೆಚ್ಚದಲ್ಲಿ ಕೊಳವೆ ಬಾವಿ ಕೊರೆಯುವಿಕೆ, ಪಂಪ್ - ಸೆಟ್‌ನ ಸಾಮಾಗ್ರಿಗಳ ಸರಬರಾಜು ಮತ್ತು ವಿದ್ಯುದ್ದೀಕರಣದ ಮೊತ್ತವನ್ನು ಭರಿಸಲಾಗುವುದು.

## 6. ಕೃಷಿ ಭೂಮಿ ಖರೀದಿ ಯೋಜನೆ :-

ಗ್ರಾಮೀಣ ಪ್ರದೇಶದಲ್ಲಿ ವಾಸವಾಗಿರುವ ಅಲ್ಪಸಂಖ್ಯಾತರ ಭೂ ರಹಿತ ಕೃಷಿ ಕಾರ್ಮಿಕರಿಗೆ 2 ಎಕರೆ ಖುಷ್ಕಿ ಅಥವಾ 1 ಎಕರೆ ತರಿ ಭೂಮಿಯನ್ನು ಫಲಾಪೇಕ್ಷಿಯ ವಾಸ ಸ್ಥಳದಿಂದ 5 ಕಿ.ಮಿ. ಅಂತರದೊಳಗೆ ಇರುವ ಕೃಷಿ

ಜಿಲ್ಲಾ ವ್ಯವಸ್ಥಾಪಕರು

Scanned with CamScanner

ಭೂಮಿಯನ್ನು ನಿಗಮದಿಂದ ಖರೀದಿಸಿ ಪತಿ ಮತ್ತು ಪತ್ನಿಯ ಹೆಸರಿನಲ್ಲಿ ನೊಂದಾಣಿ ಮಾಡಿಕೊಡಲಾಗುವುದು. ಫಲಾನುಭವಿಗೆ ನೀಡುವ ಭೂಮಿ ಬೆಲೆಯಲ್ಲಿ ಶೇ. 50 ರಷ್ಟನ್ನು ಅವದಿ ಸಾಲ ಶೇ. 6 ರ ಬಡ್ಡಿ ದರದಲ್ಲಿ ಮತ್ತು ಉಳಿದ ಶೇ. 50 ರಷ್ಟನ್ನು ಸಹಾಯಧನವನ್ನಾಗಿ ಪರಿಗಣಿಸಲಾಗುತ್ತಿದೆ. ಭೂಮಿಯ ಮಾರ್ಗದರ್ಶಿ ಬೆಲೆಯ 3 ಪಟ್ಟು ಅಥವಾ ಗರಿಷ್ಟ 10.00 ಲಕ್ಷಗಳ ಘಟಕ ವೆಚ್ಚ ವಾಗಿರುತ್ತದೆ. ಫಲಾನುಭವಿಗೆ ಮಂಜೂರು ಮಾಡುವ ಅವದಿ ಸಾಲ 10 ವರ್ಷ ಅವಧಿಯಲ್ಲಿ ಅರ್ದವಾರ್ಷಿಕ ಕಂತುಗಳಲ್ಲಿ ಮರುಪಾವತಿ ಮಾಡಬೇಕಾಗುತ್ತದೆ. ಕೃಷಿ ಜಮೀನು ಮಾರಾಟ ಮಾಡುವವರು ಪರಿಶಿಷ್ಠ ಜಾತಿ, ಪರಿಶಿಷ್ಠ ಪಂಗಡ ಮತ್ತು ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿರಬಾರದು. ಭೂಮಿ ಮಾರಾಟಮಾಡುವವರು ಸ್ವಯಂ ಲಿಖಿತ ಅರ್ಜಿಯ ಜೊತೆಗೆ ಭೂಮಿಯ ಅವಶ್ಯ ಎಲ್ಲಾ ದಾಖಲೆಗಳನ್ನು ಸಲ್ಲಿಸಬೇಕು.

7. ಕ್ರೈಸ್ತ ಸಮುದಾಯದವರಿಗಾಗಿ ನಿವೇಶನ / ಗೃಹ ನಿರ್ಮಾಣ ಸಾಲದ ಮೇಲಿನ ಬಡ್ಡಿ ಸಹಾಯಧನ ಯೋಜನೆ :-

ರಾಷ್ಟ್ರೀಕೃತ ಹಣಕಾಸು ಸಂಸ್ಥೆಗಳಿಂದ ಪಡೆದ ರೂ. 5.00 ದ ವರೆಗಿನ ಗೃಹ ಸಾಲಕ್ಕೆ 1.00 ಲಕ್ಷದ ವರೆಗೆ ಬಡ್ಡಿ ಸಹಾಯಧನ ಸೌಲಭ್ಯ ನೀಡಲಾಗುವುದು.

## 8. ಕ್ರಿಶ್ಚಿಯನ್ ಸಮುದಾಯದ ವಿಶೇಷ ಅಭಿವೃದ್ಧಿ ಯೋಜನೆ :-

2011-12ನೇ ಸಾಲಿನಿಂದ ಕ್ರಿಶ್ಚಿಯನ್ ಸಮುದಾಯದ ಅಭಿವೃದ್ಧಿಗಾಗಿ ಕರ್ನಾಟಕ ಕ್ರಿಶ್ಚಿಯನ್ ಪರಿಷತ್‌ನ್ನು ದಿನಾಂಕ 05-11-2011 ರಂದು ರಚಿಸಿ ಕ್ರೈಸ್ತ ಸಮುದಾಯದ ಸರ್ವತೋಮುಖ ಅಭಿವೃದ್ಧಿಗಾಗಿ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸುವ ಸಲುವಾಗಿ ಆಯವ್ಯಯದಲ್ಲಿ ಅನುದಾನವನ್ನು ಒದಗಿಸಿ ಈ ಕೆಳಕಂಡ ಯೋಜನೆಗಳನ್ನು ನಿಯಮಾನುಸಾರ ಅನುಷ್ಠನಾಗೊಳಿಸಲಾಗುತ್ತಿದೆ.

1. ಸ್ವಯಂ ಉದ್ಯೋಗ ಯೋಜನೆ
2. ಶ್ರಮಶಕ್ತಿ ಯೋಜನೆ
3. ಮೈಕ್ರೋಸಾಲ ಮತ್ತು ಸಹಾಯಧನ ಯೋಜನೆ
4. ಅರಿವು (ವಿಧ್ಯಾಭ್ಯಾಸ ಸಾಲ) ಯೋಜನೆ
5. ಗಂಗಾ ಕಲ್ಯಾಣ ಯೋಜನೆ

## 2017-18ನೇ ಸಾಲಿನಿಂದ ಜಾರಿಗೊಳ್ಳುತ್ತಿರುವ ಹೊಸ ಯೋಜನೆಗಳು.

## 9. ಪಶು ಸಂಗೋಪನೆ ಯೋಜನೆ :-

ಪಶುಸಂಗೋಪನೆಗೆ ಉತ್ತೇಜನ ನೀಡಿ ಗ್ರಾಮೀಣ ಪ್ರದೇಶದ ಮತೀಯ ಅಲ್ಪಸಂಖ್ಯಾತರ ಸಮುದಾಯದ ಮಹಿಳೆಯರು ನಿರಂತರ ಆದಾಯ ಪಡೆಯುವ ಸಲುವಾಗಿ ಹೈನುಗಾರಿಕೆ, ಕೋಳಿಸಾಕಾಣಿಕೆ, ಕುರಿ ಸಾಕಾಣಿಕೆ ಮುಂತಾದ ಕೃಷಿ ಸಂಬಂಧಿಸಿದ ಚಟುವಟಿಕೆಗಳನ್ನು ಕೈಗೊಳ್ಳಲು ಶೇ 50% ಸಹಾಯಧನ ಸೇರಿ ರೂ. 40,000/-ಗಳ ಘಟಕ ವೆಚ್ಚವನ್ನು ಮಂಜೂರು ಮಾಡಲಾಗುವುದು ಅರ್ಜಿದಾರ ವಯೋಮಿತಿ 45 ವರ್ಷದೊಳಗಿರಬೇಕು.

## 10. ಟ್ಯಾಕ್ಸಿ /ಗೂಡ್ಸ್, ಆಟೋರಿಕ್ಷಾ ಖರೀದಿ ಸಹಾಯಧನ ಯೋಜನೆ :-

ಆರ್ಥಿಕವಾಗಿ ಹಿಂದುಳಿದ ಮತೀಯ ಅಲ್ಪಸಂಖ್ಯಾತ ಸಮುದಾಯದವರು ನಗರಗಳಲ್ಲಿ ಮತ್ತು ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಿನ ವಿದ್ಯಾಭ್ಯಾಸವನ್ನು ಪೂರೈಸಲು ಸಾದ್ಯವಾಗದೇ ವಾಹನ ಚಾಲಕರಾಗಿ ಜೀವನವನ್ನು ಸಾಗಿಸುತ್ತಿದ್ದಾರೆ. ಇವರ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸುವ ಉದ್ದೇಶದಿಂದ ರಾಷ್ಟ್ರೀಕೃತ ಬ್ಯಾಂಕುಗಳ ಸಹಯೋಗದೊಂದಿಗೆ ಟ್ಯಾಕ್ಸಿ/ಗೂಡ್ಸ್ ವಾಹನವನ್ನು ಖರೀದಿಸಲು ಗರಿಷ್ಠ ರೂ. 3.00 ಲಕ್ಷಗಳ ಸಹಾಯಧನವನ್ನು ಈ ಯೋಜನೆಯಲ್ಲಿ ನೀಡಲಾಗುವುದು. ಹಾಗೂ ಉಳಿದ ಮೊತ್ತ ಬ್ಯಾಂಕ್‌ಗಳಿಂದ ಚಾಲ್ತಿ ಬಡ್ಡಿ ದರದಲ್ಲಿ ಸಾಲ ನೀಡಲಾಗುವುದು. ಅರ್ಜಿದಾರರ ವಯೋಮಿತಿ 45 ವರ್ಷದೊಳಗಿರಬೇಕು. ಡ್ರೈವಿಂಗ್ ಪರವಾನಿಗೆ ಬ್ಯಾಡ್ಜ್ ಹೊಂದಿರಬೇಕು.

ಜಿಲ್ಲಾ ವ್ಯವಸ್ಥಾಪಕರು

Scanned with CamScanner

## 11. ಪ್ರವಾಸಿ ಲೋನ್ ಯೋಜನೆ :-

ಕೊಲ್ಲಿ ರಾಷ್ಟ್ರಗಳಿಂದ ಉದ್ಯೋಗಾವಕಾಶ ವಂಚಿತರಾಗಿ ಅಂತಿಮ ಯಗ್‌ಜಿಟ್ ಮುದ್ರಯೊಂದಿಗೆ ಹಿಂತಿರುಗಿದ ಅಲ್ಪಸಂಖ್ಯಾತ ಸಮುದಾಯದ ನಿರುದ್ಯೋಗಿಗಳಿಗೆ ಸ್ವಯಂ ಉದ್ಯೋಗ ಪ್ರಾರಂಭಿಸಲು ಅಥವಾ ಅಭಿವೃದ್ಧಿಪಡಿಸಲು ಕೇರಳ ಮಾದರಿಯ ಯೋಜನೆ ಗರಿಷ್ಠ ರೂ. 10.00 ಲಕ್ಷಗಳ ಅವದಿ ಸಾಲವನ್ನು ಶೇ 5% ರ ಬಡ್ಡಿ ದರದಲ್ಲಿ ನಿಗಮದಿಂದ ಸೌಲಭ್ಯವನ್ನು ಒದಗಿಸಲಾಗುವುದು. ಸದರಿ ಯೋಜನೆಯ ಸಾಲದ ಮೊತ್ತಕ್ಕೆ ಸ್ಥಿರಾಸ್ತಿಯನ್ನು ಪೂರಕ ಭದ್ರತೆಯಾಗಿ ನೀಡಬೇಕು.

## 12. ರೈತ ಕಲ್ಯಾಣ ಯೋಜನೆ :-

ಅಲ್ಪಸಂಖ್ಯಾತರ ಸಮುದಾಯದ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಕೃಷಿ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಪ್ರೋತ್ಸಾಹಿಸಲು ಉಳುಮೆಯಿಂದ ಕೋಯ್ಲುವರೆಗೆ ಕೃಷಿ ಸಂಬಂಧಿಸಿದ ಆಧುನಿಕ ಕೃಷಿ ಉಪಕರಣಗಳಾದ ಸಣ್ಣ ಟ್ರಾಕ್ಟರ್ (25 HP) ಇಂಜಿನ್, ಪವರ್ ಟಿಲ್ಲರ್, ಭೂಮಿ ಸಿದ್ದತೆಯ ನಾಟಿ/ಬಿತ್ತನೆ ಉಪಕರಣ, ಅಂತರ ಬೇಸಾಯ ಉಪಕರಣ, ಡಿಸೇಲ್ ಪಂಪ್‌ಸೆಟ್ ಮತ್ತು ಸಸ್ಯ ಸಂರಕ್ಷಣ ಉಪಕರಣಗಳು ಹಾಗೂ ಇತ್ಯಾದಿಗಳನ್ನು ಖರೀದಿಸಲು ರೂ. 1.00 ಲಕ್ಷಗಳ ವರೆಗೆ ಸಾಲ ಸೌಲಭ್ಯ ಶೇ 3% ಬಡ್ಡಿ ದರದಲ್ಲಿ ನೀಡಲಾಗುವುದು ಇದರಲ್ಲಿ ಶೇ. 50% ರ ಸಹಾಯ ಧನವಿರುತ್ತದೆ. ಅಲ್ಲದೆ ಆಧುನಿಕ ಕೃಷಿ ಉಪಕರಣದ ಮೌಲ್ಯವು ರೂ 1.00 ಲಕ್ಷಕ್ಕಿಂತ ಹೆಚ್ಚಿಗೆ ಇದ್ದಲ್ಲಿ ವ್ಯತ್ಯಾಸದ ಮೊತ್ತವನ್ನು ರೈತರು ಸ್ವತ: ಸರಬರಾಜುದಾರರಿಗೆ ಪಾವತಿಸಬೇಕು.

## 13. ಆಟೋ ಮೊಬೈಲ್ ಸರ್ವಿಸ್ ತರಬೇತಿ ಮತ್ತು ಸಾಲ ಯೋಜನೆ :-

ಮತೀಯ ಅಲ್ಪಸಂಖ್ಯಾತ ಸಮುದಾಯದ ವಿದ್ಯಾವಂತ ನಿರುದ್ಯೋಗಿ ಯುವಕ/ಯುವತಿಯರಿಗೆ ಆಟೋ ಮೊಬೈಲ್ ಸರ್ವಿಸ್ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ತರಭೇತಿಯನ್ನು ಪ್ರತಿಷ್ಠಿತ ಆಟೋ ಮೊಬೈಲ್ ಸರ್ವಿಸ್ ಸಂಸ್ಥೆಗಳಾದ ಟೊಯೋಟಾ, ವೋಲ್‌ವೋ, ಟಾಟಾ, ಟಫೇ ಇವರುಗಳ ಸಹಯೋಗದೊಂದಿಗೆ ನೀಡಲಾಗುವುದು. ಅಲ್ಲದೆ ಇವರಿಗೆ ಸ್ವಯಂ ಉದ್ಯೋಗ ಕಲ್ಪಿಸಲು ರಾಷ್ಟ್ರೀಕೃತ/ ಷೆಡ್ಯೂಲ್/ಗ್ರಾಮೀಣ ಬ್ಯಾಂಕ್‌ಗಳಿಂದ ರೂ 2.00 ಲಕ್ಷಗಳಿಂದ ರೂ. 5.00 ಲಕ್ಷಗಳವರೆಗೆ ನೀಡಲಾಗುವ ಸಾಲಕ್ಕೆ ನಿಗಮದಿಂದ ಶೇ35% ರಷ್ಟು ಅಂದರೆ ರೂ 70,000 ರಿಂದ ಗರಿಷ್ಠ ರೂ 1-25 ಲಕ್ಷಗಳ ಸಹಾಯಧನವನ್ನು ಮಂಜೂರು ಮಾಡಲಾಗುವುದು.

## 14. ಮನೆ ಮಳಿಗೆ ಯೋಜನೆ :-

ಈ ಯೋಜನೆಯನ್ನು ಕೆಳಕಂಡ ಎರಡು ವಿಭಾಗಗಳ ರಾಜ್ಯದ ಅಲ್ಪಸಂಖ್ಯಾತ ವಿಶೇಷ ಹಾಗೂ ದುರ್ಬಲ ವರ್ಗದ ಫಲಾನುಭವಿಗಳಿಗೆ ಇವರ ಆರ್ಥಿಕ ಮಟ್ಟವನ್ನು ಉತ್ತಮಗೊಳಿಸಲು ಹಾಗೂ ಈ ವರ್ಗದವರು ಸ್ವಾವಲಂಬಿಗಳಾಗಿ ಬದುಕುವ ನಿಟ್ಟಿನಲ್ಲಿ ಆರ್ಥಿಕ ಸಬಲರಾನ್ನಾಗಿಸಲು ರೂ. 5.00 ಲಕ್ಷಗಳ ವರೆಗೂ ಯೋಜನೆಯಲ್ಲಿ ನೀಡಲಾಗುವುದು.

- ರಾಜ್ಯದಲ್ಲಿ ಕೋಮು ಗಲಭೆ ಮತ್ತು ಕೋಮು ಹಿಂಸಾಚಾರದ ಸಂದರ್ಭಗಳಲ್ಲಿ ಹಾಗೂ ಪರಿಸರ ವಿಕೋಪಗಳಿಂದ ವ್ಯಾಪಾರ ಕೇಂದ್ರಗಳು ಹಾಗೂ ವಾಸದ ಮನೆಗಳು ನಾಶ ಅಥವಾ ಹಾನಿಗೊಳಗಾಗಿ ಫಲಾನುಭವಿಗಳಿಗೆ ಸಾಲ ಸೌಲಭ್ಯವನ್ನು ನೀಡಲಾಗುವುದು.
- ಸನ್ನಡತೆ ಆಧಾರದ ಮೇಲೆ ಕಾರಾಗೃಹ ವಾಸದಿಂದ ಬಿಡುಗಡೆಯಾದ ಖೈದಿಗಳಿಗೆ, ಭಯೋತ್ಪಾದಕ ವಿರೋಧಿ ಚಟುವಟಿಕೆ, ಗೂಂಡಾ ಕಾಯಿದೆಯಡಿ ಬಂಧಿತರಾಗಿ ಪ್ರಕರಣಗಳು ಸಾಬೀತಾಗದೇ ನ್ಯಾಯಾಲದಿಂದ ಬಿಡುಗಡೆಯಾದ ನಿರಾಪರಾಧಿಗಳಿಗೆ ಹಾಗೂ ವಿವಿಧ ಸುರಕ್ಷತೆ ಕಾಯಿದೆಯಡಿ ಬಂಧಿತರಾಗಿ ಹಲವಾರು ವರ್ಷಗಳ ನಂತರ ನ್ಯಾಯಾಲಯದಿಂದ ಬಿಡುಗಡೆಯಾದ ನಿರಪರಾಧಿಗಳು ಇವರಿಗೆ ಜೀವನೋಪಾಯವನ್ನು ಕಲ್ಪಿಸಲು ಇಂತಹ ಅಲ್ಪಸಂಖ್ಯಾತರ ವರ್ಗದವರನ್ನು ಗುರುತಿಸಿ ಸಾಲ ಸೌಲಭ್ಯವನ್ನು ನೀಡಿ ಇವರ ಜೀವನವನ್ನು ಉತ್ತಮಗೊಳಿಸಲು ಉದ್ದೇಶಿಸಲಾಗಿದೆ.

## 15. ವೃತ್ತಿಪ್ರೋತ್ಸಾಹ ಯೋಜನೆ :-

ಜಿಲ್ಲಾ ವ್ಯವಸ್ಥಾಪಕರು
ಕ.ಅ.ಅ.ನಿ., ತುಮಕೂರು

Scanned with CamScanner

ಈ ಯೋಜನೆಯಡಿ ಹಣ್ಣು ಮತ್ತು ತರಕಾರಿ ಮಾರಾಟ ಅಂಗಡಿ, ಮಾಂಸದ ಅಂಗಡಿ, ಮೀನು ಮಾರಾಟ ಅಂಗಡಿ, ಎಳನೀರು/ಕಬ್ಬಿಣ ಹಾಲು ಮಾರಾಣ ಅಂಗಡಿ/ತಂಪು ಪಾನೀಯ ಅಂಗಡಿ, ಹೈನುಗಾರಿಕೆ, ಬೇಕರಿ, ಲಾಂಡ್ರಿ, ಡ್ರೈಕ್ಲೀನಿಂಗ್, ಎ.ಸಿ. ರಿಪೇರಿ ರೆಫ್ರಿಜರೇಟರ್, ಮೋಟಾರ್ ರಿವೈಂಡಿಗ್ ವರ್ಕ್, ವಾಟರ್ ಸರ್ವೀಸ್, ಪಂಚರ್ ಶಾಪ್, ಗ್ಯಾಸ್ ವೆಲ್ಡಿಂಗ್, ಮೆಕಾನಿಕ್, ಕಾಂಪ್ಯೂಟರ್, ಎಲೆಕ್ಟ್ರಿಕಲ್/ಎಲೆಕ್ಟ್ರಾನಿಕ್ ವಸ್ತುಗಳ ರಿಪೇರಿ ಇತ್ಯಾದಿ, ವೃತ್ತಿಗಳ ಅಂಗಡಿಗಳ ಆಧುನೀಕರಣಕ್ಕೆ (**Modernisation of Shops**) ಅಗತ್ಯವಿರುವ ಬಂಡವಾಳಕ್ಕಾಗಿ ಅಲ್ಪಸಂಖ್ಯಾತರು ರಾಷ್ಟ್ರೀಕೃತ ಬ್ಯಾಂಕ್/ ಷೆಡ್ಯೂಲ್ಡ್ ಬ್ಯಾಂಕ್/ ಗ್ರಾಮೀಣ ಬ್ಯಾಂಕ್ ನಿಂದ ಪಡೆಯುವ ರೂ. 2.00 ಲಕ್ಷಗಳ (ಎರಡು ಲಕ್ಷ ರೂಪಾಯಿಗಳು ಮಾತ್ರ) ಸಾಲಕ್ಕೆ ನಿಗಮದಿಂದ 1.00 ಲಕ್ಷದ (ಒಂದು ಲಕ್ಷ ರೂಪಾಯಿಗಳು ಮಾತ್ರ) ಸಹಾಯಧನವನ್ನು ಮಂಜೂರು ಮಾಡಲಾಗುತ್ತದೆ.

## ಆಯ್ಕೆ ವಿಧಾನ :-

ಆಯಾ ವಿಧಾನಸಭಾ ಕ್ಷೇತ್ರಗಳ ಮಾನ್ಯ ಶಾಸಕರುಗಳ ಅಧ್ಯಕ್ಷತೆಯಲ್ಲಿ ರಚಿತವಿರುವ ಆಯ್ಕೆ ಸಮಿತಿ ಮೂಲಕ ಸ್ವಯಂ ಉದ್ಯೋಗ ಯೋಜನೆ, ಶ್ರಮಶಕ್ತಿ ಯೋಜನೆ, ಮೈಕ್ರೋ ಸಾಲ ಮತ್ತು ಸಹಾಯಧನ ಯೋಜನೆ, ಮೈಕ್ರೋ ವೈಯಕ್ತಿಕ ಯೋಜನೆ ಮತ್ತು ಗಂಗಾ ಕಲ್ಯಾಣ ಯೋಜನೆ ಗಳ ಫಲಾನುಭವಿಗಳನ್ನು ಸಾಮಾನ್ಯ ಅರ್ಹತೆಗಳ ಮೇಲೆ ಆಯ್ಕೆ ಮಾಡಲಾಗುವುದು.

ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿತವಿರುವ ಜಿಲ್ಲಾ ಆಯ್ಕೆ ಸಮಿತಿ ಮೂಲಕ ಕೃಷಿ ಭೂ ಖರೀದಿ ಯೋಜನೆ, ಪಶುಸಂಗೋಪನೆ ಯೋಜನೆ, ಟ್ಯಾಕ್ಸಿ/ಗೂಡ್ಸ್, ಆಟೋರಿಕ್ಷಾ ವಾಹನ ಖರೀದಿ ಯೋಜನೆ, ಪ್ರವಾಸಿ ಸಾಲ ಯೋಜನೆ ಮತ್ತು ರೈತ ಕಲ್ಯಾಣ ಯೋಜನೆಗಳ ಫಲಾನುಭವಿಗಳನ್ನು ಯೋಜನೆಗಳ ಮಾರ್ಗಸೂಚಿಯನ್ವಯ ಆಯ್ಕೆ ಮಾಡಲಾಗುವುದು.

ಮಾನ್ಯ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು ಜಿಲ್ಲಾ ಪಂಚಾಯತ್ ರವರ ಅಧ್ಯಕ್ಷತೆಯಲ್ಲಿ ರಚಿತವಿರುವ ಜಿಲ್ಲಾ ಆಯ್ಕೆ ಸಮಿತಿ ಮೂಲಕ ಆಟೋ ಮೊಬೈಲ್ ಸರ್ವಿಸ್ ತರಬೇತಿ ಮತ್ತು ಸಾಲ ಯೋಜನೆ, ಮನೆ ಮಳಿಗೆ ಯೋಜನೆ ಮತ್ತು ವೃತ್ತಿಪ್ರೋತ್ಸಾಹ ಯೋಜನೆಗಳ ಮಾರ್ಗಸೂಚಿಯನ್ವಯ ಆಯ್ಕೆ ಮಾಡಲಾಗುವುದು.

## ಜಿಲ್ಲಾ ವ್ಯವಸ್ಥಾಪಕರ ಅಧಿಕಾರ ಮತ್ತು ಕರ್ತವ್ಯಗಳು.

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಜಿಲ್ಲಾ ಕಛೇರಿಯಲ್ಲಿ ಜಿಲ್ಲಾ ವ್ಯವಸ್ಥಾಪಕರು ಜಿಲ್ಲಾ ಕಛೇರಿಯ ಪೂರ್ಣ ಆಡಳಿತ ನಿರ್ವಹಣೆ, ಯೋಜನೆಯ ಅನುಷ್ಠಾನ ಗುರಿ ಸಾಧನೆ, ಬ್ಯಾಂಕ್/ಹಣಕಾಸು ಸಂಸ್ಥೆಗಳೊಡನೆ ವ್ಯವಹಾರ, ಪ್ರಕಟಣೆ ಮೂಲಕ ಅರ್ಜಿಗಳನ್ನು ಆಹ್ವಾನಿಸಿ ಸ್ವೀಕರಿಸುವುದು ಮತ್ತು ಸಂಬಂಧಿಸಿದ ಆಯ್ಕೆ ಸಮಿತಿಗಳ ಅನುಮೋದನೆ ಪಡೆದು ಗುರಿಯನ್ವಯ ಸಾಲ ಸೌಲಭ್ಯಗಳನ್ನು ವಿತರಿಸಿ, ಲೆಕ್ಕಪತ್ರ, ಇತ್ಯಾದಿ ಕಾರ್ಯಗಳನ್ನು ನಿರ್ವಹಣೆ ಮಾಡುವ ಅಧಿಕಾರ ನೀಡಲಾಗಿದೆ.

## ಜಿಲ್ಲಾ ವ್ಯವಸ್ಥಾಪಕರ ಕರ್ತವ್ಯಗಳು.

1. ಜಿಲ್ಲಾ ಕಛೇರಿಯ ಸಂಪೂರ್ಣ ಆಡಳಿತ ನಿರ್ವಹಣೆ, ಗುರಿಯನ್ವಯ ಎಲ್ಲಾ ಯೋಜನೆಯ ಅನುಷ್ಠಾನ ಮತ್ತು ಗುರಿ ಸಾಧನೆಯ ಜವಾಬ್ದಾರಿ ಮತ್ತು ಸಾಲ ವಸೂಲಾತಿಗೆ ಸಂಪೂರ್ಣ ಜವಾಬ್ದಾರರಾಗಿರುತ್ತಾರೆ.
2. ಅಗತ್ಯ ಸಭೆಗಳಿಗೆ ಹಾಜರಾಗುವುದು, ಯೋಜನೆಗಳ ಬಗ್ಗೆ ಜನಪ್ರತಿನಿಧಿಗಳಿಗೆ ಮಾಹಿತಿ ನೀಡುವುದು.
3. ವಿವಿಧ ಇಲಾಖೆಗಳು, ಬ್ಯಾಂಕ್‌ಗಳು ಮತ್ತು ಹಣಕಾಸು ಸಂಸ್ಥೆಗಳೊಂದಿಗೆ ಯೋಜನೆಯ ಅನುಷ್ಠಾನಕ್ಕಾಗಿ ಸಮನ್ವಯಾಧಿಕಾರಿಯಾಗಿ ಕೆಲಸ ನಿರ್ವಹಿಸುವುದು.
4. ಸರ್ಕಾರದ ವಿವಿಧ ಆದೇಶಗಳಲ್ಲಿ ಮತ್ತು ನಿಗಮದ ಆದೇಶ ಪತ್ರ ಮತ್ತು ಸುತ್ತೋಲೆಗಳಲ್ಲಿ ವಹಿಸಿದ ಜವಾಬ್ದಾರಿಗಳನ್ನು ನಿರ್ವಹಿಸುವುದು.

ಜಿಲ್ಲಾ ವ್ಯವಸ್ಥಾಪಕರು
ಕೆ.ಎಂ.ಡಿ.ಸಿ., ತುಮಕೂರು

Scanned with CamScanner

5. ತಿಂಗಳಿಗೆ ಕನಿಷ್ಠ ಹತ್ತು ದಿನಗಳ ಪ್ರವಾಸ ಮಾಡಿ ಸಾಲ ವಸೂಲಾತಿ ಮತ್ತು ಘಟಕ ತಪಾಸಣೆ ಮಾಡುವುದು. ಸಂದರ್ಭಾನುಸಾರ ವಿವಿಧ ತಾಲ್ಲೂಕು ಹೋಬಳಿ ಕೇಂದ್ರಗಳಲ್ಲಿ ವಾಸ್ತವ್ಯ ಮಾಡುವುದು.
6. ನಿಗಮದ ವಿವಿಧ ಯೋಜನೆಗಳ ಅನುಷ್ಠಾನದೊಂದಿಗೆ ಸಂಬಂಧಿಸಿದ ವಿವಿಧ ರಿಜಿಸ್ಟರ್‌ಗಳ ನಿರ್ವಹಣೆ, ಸಾಲದ ದಾಸ್ತಾವೇಜುಗಳ ನಿರ್ವಹಣೆಯ ಪೂರ್ಣ ಜವಾಬ್ದಾರಿ.
7. ಪ್ರತಿಯೊಂದು ಯೋಝುನೆಯಡಿ ಜಿಲ್ಲೆಯ ಎಲ್ಲಾ ಭಾಗದ ಮತೀಯ ಅಲ್ಪಸಂಖ್ಯಾತರಿಗೆ ಸಮಾನ ಅವಕಾಶ/ಸಾಲ ಸೌಲಭ್ಯ ದೊರಕುವಂತೆ ಆಯ್ಕೆ ಮಾಡಬೇಕು (80:10:10)
8. ಸಾಲ ಮಂಜೂರಾದಂತೆ, ಹಣ ಬಿಡುಗಡೆಗೆ ಮೊದಲು, ಮಂಜೂರಾತಿ ಆದೇಶದಲ್ಲಿ ತೋರಿಸಿರುವ/ಆಗಿಂದ್ದಾಗ್ಗೆ ನೀಡಿರುವ ನಿರ್ದೇಶನಗಳಂತೆ, ದಾಖಲಾತಿಗಳನ್ನು/ಪೂರಕ ಭದ್ರತೆಗಳನ್ನು ಪಡೆಯಬೇಕು.
9. ಅರ್ಜಿಗಳನ್ನು ಬ್ಯಾಂಕ್‌ಗಳಿಗೆ ಶಿಫಾರಸ್ಸು ಮಾಡುವಾಗ ಗುರಿಗೆ ತಕ್ಕಂತೆ/ಹಣಕಾಸು ಲಭ್ಯತೆ ಆಧರಿಸಿ ಅರ್ಜಿಗಳನ್ನು ಕಳುಹಿಸಬೇಕು.
10. ಎಲ್ಲಾ ಸಂಧರ್ಭದಲ್ಲು ನಿಗಮದ ಮತ್ತು ಫಲಾನುಭವಿಗಳ ಹಿತವನ್ನು ಕಾಪಾಡುವ ರೀತಿಯಲ್ಲಿ ಕೆಲಸ ನಿರ್ವಹಿಸಬೇಕು.
11. ರಾಷ್ಟ್ರೀಕೃತ ಹಾಗೂ ಷೆಡ್ಯೂಲ್ ಬ್ಯಾಂಕ್‌ಗಳಿಗೆ ಸಾಲ ಮಂಜೂರಾತಿಗೆ ಶಿಫಾರಸ್ಸು ಮಾಡಬೇಕು.
12. ಸಾಲ ವಸೂಲಾತಿಗೆ ಪ್ರಥಮ ಆದ್ಯತೆ ನೀಡಿ, ತಿಂಗಳವಾರು ನೀಡಿರುವ ಗುರಿಯನ್ನು ತಪ್ಪದೇ ಸಾಧಿಸಬೇಕು
13. ನಿಗಮದ ಜಿಲ್ಲಾ ಕಛೇರಿಯಿಂದ ಖರ್ಚು ಮಾಡಿದ ಪ್ರತಿ ಒಂದು ರೂಪಾಯಿಗು ಜಿಲ್ಲಾ ವ್ಯವಸ್ಥಾಪಕರು ಜವಾಬ್ದಾರರಾಗಿದ್ದು, ಸರಿಯಾದ ಲೆಕ್ಕಾಚಾರ ಇಟ್ಟುಕೊಳ್ಳಬೇಕು.
14. ಸರಬರಾಜು ಸಂಸ್ಥೆಗೆ ಚಕ್ ನೀಡಿದಾಗ ತಪ್ಪದೇ ಸ್ವೀಕೃತಿ ಪಡೆದು ಕಡತದಲ್ಲಿ ಜೋಡಿಸಿಕೊಳ್ಳಬೇಕು ( ಕ್ರಾಸ್ಡ್ ಚಕ್ ನೀಡಬೇಕು). ಚೆಕ್ ನೀಡುವುದಕ್ಕೆ ಮೊದಲು ಅಥವಾ ಚೆಕ್ ನೀಡುವಾಗಲೇ ಸ್ವತ್ತುಗಳು ಫಲಾನುಭವಿಯ ವಶಕ್ಕೆ ಸಿಗುವಂತೆ ನೋಡಿಕೊಳ್ಳಬೇಕು.
15. ಮಧ್ಯವರ್ತಿಗಳು ನಿಗಮದ ಫಲಾನುಭವಿಗಳ ಶೋಷಣೆ ಮಾಡುವುದನ್ನು ತಪ್ಪಿಸಬೇಕು.
16. ನಿಗಮಕ್ಕೆ ಸಂಬಂಧಿಸಿದಂತೆ as per financial code ಹಣಕಾಸಿನ ನಿರ್ವಹಣೆ ವೆಚ್ಚದ ಬಗ್ಗೆ ಆಗಿಂದ್ದಾಗ್ಗೆ ಕಾಲಕಾಲಕ್ಕೆ ಸರ್ಕಾರದಿದ ಹೊರಡಿಸುವ ಆದೇಶ, ಸುತ್ತೋಲೆ, ಮತ್ತು ಮಾರ್ಗದರ್ಶನಗಳನ್ನು ಕಟ್ಟು ನಿಟ್ಟಾಗಿ ಪಾಲಿಸುವುದು.
17. ಮಾಹಿತಿಯನ್ನು ಅಧಿನಿಯಮ 2005ರ Chapter 11, Section V(1) ರ ಅನ್ವಯ ನಿಗಮದ ಜಿಲ್ಲಾ ಮಟ್ಟಕ್ಕೆ ಸಂಬಂಧಿಸಿದಂತೆ ಸಾರ್ವಜನಿಕ ಮಾಹಿತಿ ಅಧಿಕಾರಿಯಾಗಿದ್ದು, ಅರ್ಜಿದಾರರು ಕೋರುವ ಮಾಹಿತಿಯನ್ನು ಒದಗಿಸುವುದು.
18. ನಿಗಮದ ವ್ಯವಸ್ಥಾಪಕ ನಿರ್ದೇಶಕರು ವಹಿಸಿದ ಇತರೆ ಕೆಲಸಗಳನ್ನು ನಿರ್ವಹಿಸುವುದು.

ಜಿಲ್ಲಾ ವ್ಯವಸ್ಥಾಪಕರು
ಕ.ಅ.ಅ.ನಿ., ತುಮಕೂರು.

Scanned with CamScanner

## ಜಿಲ್ಲಾ ಕಛೇರಿ ರಚನೆ

ಜಿಲ್ಲಾ ವ್ಯವಸ್ಥಾಪಕರು

↓

ಅಭಿವೃದ್ಧಿ ಪರಿವೀಕ್ಷರು

↓

ಡಾಟಾ ಎಂಟ್ರಿ ಆಪರೇಟರ್

## ಜಿಲ್ಲಾ ಕಛೇರಿ ಕೆಲಸದ ಹಂಚಿಕೆ ಕುರಿತು.

ವಿಷಯ ನಿರ್ವಾಹಕರು : 1

| | |
|---|---|
| 01 | ಚುಕ್ಕೆ ಗುರುತಿನ ಪ್ರಶ್ನೆಗೆ ಉತ್ತರಿಸುವ ಕಡತ ನಿರ್ವಹಣೆ |
| 02 | ಕಛೇರಿಗೆ ಸಂಬಂಧಿಸಿದಂತೆ ಬಿಲ್ಲುಗಳ ತಯಾರಿ ಮತ್ತು ಪಾವತಿ |
| 03 | ನಿರ್ದೇಶನಾಲಯದಿಂದ ಬಂದ ಇತರೆ ಕಡತಗಳ ನಿರ್ವಹಣೆ |
| 04 | ಮಾಹಿತಿ ಹಕ್ಕು ಕಾಯ್ದೆಯಡಿ ಬರುವ ಅರ್ಜಿಗಳ ವಿಲೇವಾರಿ ಮತ್ತು ವರದಿಗಳ ಕಡತಗಳ ನಿರ್ವಹಣೆ |
| 05 | ಕೇಂದ್ರ ಕಛೇರಿಯಿಂದ ಬಿಡುಗಡೆ ಮಾಡಲಾದ ಅನುದಾನಗಳ ನಿರ್ವಹಣೆ |
| 06 | ಸಾದಿಲ್ವಾರು ಕಡತದ ವೆಚ್ಚ ನಿರ್ವಹಣೆ. |
| 07 | ಕಛೇರಿ ಬಾಡಿಗೆ ಕಡತದ ನಿರ್ವಹಣೆ |
| 08 | ತುಮಕೂರು ನಗರ ವಿಧಾನಸಭಾ ಕ್ಷೇತ್ರದ ಶ್ರಮಶಕ್ತಿ ಯೋಜನೆ ದಾಸ್ತಾವೇಜು ನಿರ್ವಹಣೆ |
| 09 | ತುಮಕೂರು ನಗರ ವಿಧಾನಸಭಾ ಕ್ಷೇತ್ರದ ಮೈಕ್ರೋ ಸಾಲ ಯೋಜನೆ ದಾಸ್ತಾವೇಜು ನಿರ್ವಹಣೆ |
| 10 | ತುಮಕೂರು ನಗರ ವಿಧಾನಸಭಾ ಕ್ಷೇತ್ರದ ಸ್ವಯಂ ಉದ್ಯೋಗ ಯೋಜನೆ ದಾಸ್ತಾವೇಜು ನಿರ್ವಹಣೆ |
| 11 | ತುಮಕೂರು ನಗರ ವಿಧಾನಸಭಾ ಕ್ಷೇತ್ರದ ವೃತ್ತಿ ಪ್ರೋತ್ಸಾಹ ಯೋಜನೆ ದಾಸ್ತಾವೇಜು ನಿರ್ವಹಣೆ |
| 12 | ತುಮಕೂರು ನಗರ ವಿಧಾನಸಭಾ ಕ್ಷೇತ್ರದ ಪಶು ಸಂಗೋಪನೆ ಯೋಜನೆ ದಾಸ್ತಾವೇಜು ನಿರ್ವಹಣೆ |
| 13 | ತುಮಕೂರು ನಗರ ವಿಧಾನಸಭಾ ಕ್ಷೇತ್ರದ ಟ್ಯಾಕ್ಸಿ ಯೋಜನೆ ದಾಸ್ತಾವೇಜು ನಿರ್ವಹಣೆ |
| 14 | ಜಿಲ್ಲಾ ವ್ಯವಸ್ಥಾಪಕರು ಸೂಚಿಸುವ ಇತರೆ ಕೆಲಸಗಳು. |

ವಿಷಯ ನಿರ್ವಾಹಕರು : 2

| | |
|---|---|
| 01 | ಗಂಗಾ ಕಲ್ಯಾಣ ಯೋಜನೆ ಅನುಷ್ಠಾನದ ಕಡತ |
| 02 | ಗಂಗಾ ಕಲ್ಯಾಣ ಯೋಜನೆಯ ಕೊಳವೆ ಬಾವಿಗಳ ವಿದ್ಯುದ್ದೀಕರಣ ಠೇವಣಿ ಪಾವತಿ ಪ್ರಗತಿ ಕಡತ ನಿರ್ವಹಣೆ |
| 03 | 06 ವಿಧಾನಸಭಾಕ್ಷೇತ್ರದ ಸಾಲ ವಸೂಲಾತಿ |
| 04 | 06 ವಿಧಾನಸಭಾ ಕ್ಷೇತ್ರಗಳ ಡಿ.ಸಿ.ಬಿ ನಿರ್ವಹಣೆ |
| 05 | 06 ವಿಧಾನಸಭಾ ಕ್ಷೇತ್ರಗಳ ಲೆಡ್ಜರ್ ನಿರ್ವಹಣೆ ಮತ್ತು ಪೋಸ್ಟಿಂಗ್ |
| 06 | 06 ವಿಧಾನಸಭಾ ಕ್ಷೇತ್ರಗಳ ಶ್ರಮಶಕ್ತಿ ಯೋಜನೆ ದಾಸ್ತಾವೇಜು ನಿರ್ವಹಣೆ |
| 07 | 06 ವಿಧಾನಸಭಾ ಕ್ಷೇತ್ರಗಳ ಮೈಕ್ರೋ ಸಾಲ ಯೋಜನೆ ದಾಸ್ತಾವೇಜು ನಿರ್ವಹಣೆ |
| 08 | 06 ವಿಧಾನಸಭಾ ಕ್ಷೇತ್ರಗಳ ಸ್ವಯಂ ಉದ್ಯೋಗ ಯೋಜನೆ ದಾಸ್ತಾವೇಜು ನಿರ್ವಹಣೆ |
| 09 | 06 ವಿಧಾನಸಭಾ ಕ್ಷೇತ್ರಗಳ ವೃತ್ತಿ ಪ್ರೋತ್ಸಾಹ ಯೋಜನೆ ದಾಸ್ತಾವೇಜು ನಿರ್ವಹಣೆ |
| 10 | 06 ವಿಧಾನಸಭಾ ಕ್ಷೇತ್ರಗಳ ಪಶು ಸಂಗೋಪನೆ ಯೋಜನೆ ದಾಸ್ತಾವೇಜು ನಿರ್ವಹಣೆ |
| 11 | ಗೃಹ ನಿರ್ಮಾಣ ಯೋಜನೆ (ಶಿರಾ, ಮಧುಗಿರಿ ) ದಾಸ್ತಾವೇಜು ನಿರ್ವಹಣೆ |
| 12. | ಆಯ್ಕೆ ಸಮಿತಿ ಸಭೆಗಳಿಗೆ ಮಾಹಿತಿ ಮಂಡಿಸುವುದು |
| 13 | ಜಿಲ್ಲಾ ವ್ಯವಸ್ಥಾಪಕರು ಸೂಚಿಸುವ ಇತರೆ ಕೆಲಸಗಳು. |

ಜಿಲ್ಲಾ ವ್ಯವಸ್ಥಾಪಕರು
ಕ.ಅ.ಅ.ನಿ.. ತುಮಕೂರು

Scanned with CamScanner

ವಿಷಯ ನಿರ್ವಾಹಕರು : 3

| | |
|---|---|
| 01 | ಅರಿವು ಯೋಜನೆ ಅನುಷ್ಠಾನ |
| 02 | ನೇರ (NMDFC) ಸಾಲ ಯೋಜನೆ |
| 03 | ಜಿಲ್ಲಾ ಕಛೇರಿಯಲ್ಲಿ ಸಾಲ ವಸೂಲಾತಿ ನಿರ್ವಹಣೆ |
| 04 | ಜಿಲ್ಲಾ ಕಛೇರಿಯ ಪತ್ರಗಳ ನಿರ್ವಹಣೆ |
| 05 | ಇಲಾಖಾ ಸಭೆಗಳ ಮಾಹಿತಿ ಸಿದ್ಧಪಡಿಸುವುದು. |
| 06 | ನಿರ್ದೇಶನಾಲಯದಿಂದ ಬಂದ ಇತರೆ ಕಡತಗಳ ನಿರ್ವಹಣೆ |
| 07 | ಕಿರುಸಾಲ ಕೋವಿಡ್-19 ಸಾಲ ಯೋಜನೆ |
| 08 | ಎಲ್ಲಾ ಯೋಜನೆಗಳ ಆನ್‌ಲೈನ್ ಕಾರ್ಯ ನಿರ್ವಹಣೆ |
| 09 | ಅರಿವು ಸಾಲ ಯೋಜನೆಯ ಡಿ.ಸಿ.ಬಿ ನಿರ್ವಹಣೆ |
| 10 | ಅರಿವು ಯೋಜನೆಯಲ್ಲಿ ವ್ಯಾಸಾಂಗ ಮುಗಿಸಿದ ಫಲಾನುಭವಿಗಳಿಗೆ ನೋಟೀಸ್ ಮಂಡಿಸುವುದು ಮತ್ತು ಮರುಪಾವತಿ ಸಂಗ್ರಹಿಸುವುದು |
| 11 | ಅರಿವು ಯೋಜನೆಯ ಲೆಡ್ಜರ್ ನಿರ್ವಹಣೆ ಮತ್ತು ಪೋಸ್ಟಿಂಗ್ |
| 12 | ಟ್ಯಾಕ್ಸಿ ವಾಹನದ ಬಾಡಿಗೆಯ ಕಡತ ನಿರ್ವಹಣೆ |
| 13 | ಹೊರಗುತ್ತಿಗೆ ನೌಕರರ ವೇತನದ ಕಡತ ನಿರ್ವಹಣೆ |
| 14 | ಜಿಲ್ಲಾ ವ್ಯವಸ್ಥಾಪಕರ ದಿನಚರಿ ಕಡತ ನಿರ್ವಹಣೆ |
| 15 | ಸಾರ್ವಜನಿಕರಿಗೆ ಯೋಜನೆಗಳ ಮತ್ತು ಇತರೆ ಮಾಹಿತಿ ನೀಡುವುದು |
| 16 | ಜಿಲ್ಲಾ ವ್ಯವಸ್ಥಾಪಕರು ಸೂಚಿಸುವ ಇತರೆ ಕೆಲಸಗಳು. |

ವಿಷಯ ನಿರ್ವಾಹಕರು : 4

| | |
|---|---|
| 01 | ನಗದು ಪುಸ್ತಕ ನಿರ್ವಹಣೆ |
| 02 | ಆಡಿಟ್ ರಿಪೋರ್ಟ್ ಮತ್ತು ಅದಕ್ಕೆ ಸಂಬಂಧಿಸಿದ ಪೂರಕ ಕಾರ್ಯ |
| 03 | 04 ವಿಧಾನಸಭಾಕ್ಷೇತ್ರದ ಫಲಾನುಭವಿಗಳಿಂದ ಎಲ್ಲಾ ಯೋಜನೆಗಳ ಸಾಲ ವಸೂಲಾತಿ ಆಂದೋಲನ ಕೈಗೊಳ್ಳುವುದು ಮತ್ತು ಸಂಗ್ರಹಿಸುವುದು. |
| 04 | 04 ವಿಧಾನಸಭಾ ಕ್ಷೇತ್ರಗಳ ಡಿ.ಸಿ.ಬಿ ನಿರ್ವಹಣೆ |
| 05 | 04 ವಿಧಾನಸಭಾ ಕ್ಷೇತ್ರಗಳ ಲೆಡ್ಜರ್ ನಿರ್ವಹಣೆ ಮತ್ತು ಪೋಸ್ಟಿಂಗ್ |
| 06 | 04 ವಿಧಾನಸಭಾ ಕ್ಷೇತ್ರಗಳ ಶ್ರಮಶಕ್ತಿ ಯೋಜನೆ ದಾಸ್ತಾವೇಜು ನಿರ್ವಹಣೆ |
| 07 | 04 ವಿಧಾನಸಭಾ ಕ್ಷೇತ್ರಗಳ ಮೈಕ್ರೋ ಸಾಲ ಯೋಜನೆ ದಾಸ್ತಾವೇಜು ನಿರ್ವಹಣೆ |
| 08 | 04 ವಿಧಾನಸಭಾ ಕ್ಷೇತ್ರಗಳ ಸ್ವಯಂ ಉದ್ಯೋಗ ಯೋಜನೆ ದಾಸ್ತಾವೇಜು ನಿರ್ವಹಣೆ |
| 09 | 04 ವಿಧಾನಸಭಾ ಕ್ಷೇತ್ರಗಳ ವೃತ್ತಿ ಪ್ರೋತ್ಸಾಹ ಯೋಜನೆ ದಾಸ್ತಾವೇಜು ನಿರ್ವಹಣೆ |
| 10 | 04 ವಿಧಾನಸಭಾ ಕ್ಷೇತ್ರಗಳ ಪಶು ಸಂಗೋಪನೆ ಯೋಜನೆ ದಾಸ್ತಾವೇಜು ನಿರ್ವಹಣೆ |
| 11 | 04 ವಿಧಾನಸಭಾ ಕ್ಷೇತ್ರಗಳ ಟ್ಯಾಕ್ಸಿ ಯೋಜನೆ ದಾಸ್ತಾವೇಜು ನಿರ್ವಹಣೆ |
| 12 | ಗೃಹ ನಿರ್ಮಾಣ ಯೋಜನೆ ( ತುಮಕೂರು ) ದಾಸ್ತಾವೇಜು ನಿರ್ವಹಣೆ ಮತ್ತು ಸಾಲ ವಸೂಲಾತಿ ಕಾರ್ಯನಿರ್ವಹಿಸುವುದು. |
| 13 | ಮಾಸಿಕ ಮರುಪಾವತಿ ಬಿಲ್ಲುಗಳ ತಯಾರಿಕೆ ಮತ್ತು ನಿರ್ವಹಣೆ |
| 14 | ಜಿಲ್ಲಾ ವ್ಯವಸ್ಥಾಪಕರು ಸೂಚಿಸುವ ಇತರೆ ಕೆಲಸಗಳು. |

ಜಿಲ್ಲಾ ವ್ಯವಸ್ಥಾಪಕರು
ಕೆ.ಎ.ಅ.ನಿ., ತುಮಕೂರು

Scanned with CamScanner

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಜಿಲ್ಲಾ ಕಛೇರಿಯ ವಿಳಾಸ ಮತ್ತು ದೂರವಾಣಿ ಸಂಖ್ಯೆ ವಿವರಗಳು ಈ ಕೆಳಕಂಡಂತಿದೆ.

ಜಿಲ್ಲಾ ವ್ಯವಸ್ಥಾಪಕರು
ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ (ನಿ)
ಸಿದ್ದಲಿಂಗೇಶ್ವರ ನಿಲಯ, ಕೆ.ಎಸ್.ಎಫ್.ಸಿ. ಎದುರು ರಸ್ತೆ,
ಕೃಷ್ಣನಗರ, 8ನೇ ಕ್ರಾಸ್,
ತುಮಕೂರು –572103
ದೂ : 0816–2281023
ಇ–ಮೇಲ್ : tumkur.kmdc@karnataka.gov.in / dmkmdc.tumkur@gmail.com
ವೆಬ್‌ಸೈಟ್ : www.kmdc.karnataka.gov.in

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಕೇಂದ್ರ ಕಛೇರಿಯ ವಿಳಾಸ ಮತ್ತು ದೂರವಾಣಿ ಸಂಖ್ಯೆಯ ವಿವರಗಳು ಈ ಕೆಳಕಂಡಂತಿದೆ.

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ (ನಿ)
ವಿಶ್ವೇಶ್ವರಯ್ಯ ಕೇಂದ್ರ, 12ನೇ ಮಹಡಿ, ಮುಖ್ಯ ಗೋಪುರ,
ಡಾ|| ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು – 560001,
ದೂರವಾಣಿ ಸಂಖ್ಯೆ : 080–22860999
080–22864782

ಸಾರ್ವಜನಿಕ ಮಾಹಿತಿ ಅಧಿಕಾರಿಯ ವಿವರ.

ಮಾಹಿತಿ ಹಕ್ಕು ಕಾಯ್ದೆ 2005 ಸೆಕ್ಷನ್ 5 (1) ಪ್ರಕಾರ ಸಾರ್ವಜನಿಕ ಮಾಹಿತಿ ಅಧಿಕಾರಿ

ಜಿಲ್ಲಾ ವ್ಯವಸ್ಥಾಪಕರು
ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ (ನಿ)
ಸಿದ್ದಲಿಂಗೇಶ್ವರ ನಿಲಯ, ಕೆ.ಎಸ್.ಎಫ್.ಸಿ. ಎದುರು ರಸ್ತೆ,
ಕೃಷ್ಣನಗರ, 8ನೇ ಕ್ರಾಸ್,
ತುಮಕೂರು –572103
ದೂ : 0816–2281023
ಇ–ಮೇಲ್ : tumkur.kmdc@karnataka.gov.in / dmkmdc.tumkur@gmail.com
ವೆಬ್‌ಸೈಟ್ : www.kmdc.karnataka.gov.in
ಮಾಹಿತಿ ಹಕ್ಕು ಕಾಯ್ದೆ 2005 ಸೆಕ್ಷನ್ 5 (1) ಪ್ರಕಾರ ಸಾರ್ವಜನಿಕ ಮಾಹಿತಿ ಅಧಿಕಾರಿ

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ (ನಿ)
ವಿಶ್ವೇಶ್ವರಯ್ಯ ಕೇಂದ್ರ, 12ನೇ ಮಹಡಿ, ಮುಖ್ಯ ಗೋಪುರ,
ಡಾ|| ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು – 560001,
ದೂರವಾಣಿ ಸಂಖ್ಯೆ : 080–22860999
080–22864782

ಜಿಲ್ಲಾ ವ್ಯವಸ್ಥಾಪಕರು
ಕ.ಅ.ಅ.ನಿ., ತುಮಕೂರು

Scanned with CamScanner